ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



# ಸ್ವಾತಂತ್ರ್ಯದ ಮಿತಿಗಳು

ಓರ್ವ ವ್ಯಕ್ತಿಯ ಸ್ವಾತಂತ್ರ್ಯ ಮತ್ತೊಬ್ಬರ ಅ-ಸ್ವಾತಂತ್ರ್ಯ- ಅನ್ ಫ್ರೀಡಮ್- ಎನ್ನುವ ಮಾತಿನೊಂದಿಗೆ ತೊಡಗಿಕೊಳ್ಳುವ ಜೋಸೆಫ್ ಸ್ಟಿಗ್ಲಿಟ್ಸ್ ಅವರ ಪುಸ್ತಕ 'ದ ರೋಡ್ ಟು ಫ್ರೀಡಮ್' ಅರ್ಥಶಾಸ್ತ್ರದಲ್ಲಿರುವ ಮೂಲಭೂತ ನಂಬಿಕೆಗಳನ್ನು ಒಂದು ನೈತಿಕ ನಿಕಷಕ್ಕೆ ಒಡ್ಡಿ, ಈಗಿರುವ ಪರಿಭಾಷೆಯನ್ನು ವಿಸ್ತರಿಸಲು ಪ್ರಯತ್ನಿಸುತ್ತದೆ. ಅನೇಕ ವರ್ಷಗಳಿಂದ ಅಸಮಾನತೆಯ ಬಗ್ಗೆ ಸಂಶೋಧನೆ ನಡೆಸುತ್ತಾ ಬರೆಯುತ್ತಾ ಬಂದಿರುವ ಥಾಮಸ್ ಪಿಕೆಟಿ ಮತ್ತು ಲೂಕಾಸ್ ಚಾನ್ಸೆಲ್ ಅವರು ಈಚೆಗೆ ಭಾರತದ ಅಸಮಾನತೆಯ ಬಗ್ಗೆ ಬರೆದಿರುವ ಬರಹದ ಹಿನ್ನೆಲೆಯಲ್ಲಿ ಸ್ಟಿಗ್ಲಿಟ್ಸ್ ಪುಸ್ತಕ ಹೆಚ್ಚು ಪ್ರಸ್ತುತವಾಗುತ್ತದೆ. ಮರುವಿತರಣೆ, ವಂಶಪಾರಂಪರ್ಯವಾಗಿ ಬಳುವಳಿ ಬಂದ ಶ್ರೀಮಂತಿಕೆಯ ಮೇಲೆ ತೆರಿಗೆ ಮತ್ತು ರೇವಡಿಗಳ ಚರ್ಚೆಯ ಹಿನ್ನೆಲೆಯಲ್ಲಿ ನಾವು ಈ ಪುಸ್ತಕವನ್ನು ಓದಬೇಕಾಗಿದೆ.

ಮುಕ್ತ ಮಾರುಕಟ್ಟೆಯ ಪೂಜಾರಿಗಳೆಂದೇ ಗುರುತಿಸಲಾಗಿರುವ ಮಿಲ್ಟನ್ ಫ್ರೀಡ್‌ಮನ್ ಮತ್ತು ಫ್ರೆಡ್ರಿಕ್ ಹೈಯಕ್ ಅವರ ನವ ಉದಾರವಾದಿ ನೀತಿಗಳನ್ನು ಸ್ಟಿಗ್ಲಿಟ್ಸ್ ಪ್ರಶ್ನಿಸುತ್ತಾರೆ. ಹದಿನೆಂಟನೇ ಶತಮಾನದಲ್ಲಿ ಅರ್ಥಶಾಸ್ತ್ರದ ಆದಿಪುರುಷನೆಂದು ಗುರುತಿಸಲಾಗುವ ಆದಮ್ ಸ್ಮಿತ್ ಅವರ 'ಥಿಯರಿ ಆಫ್ ಮಾರಲ್ ಸೆಂಟಿಮೆಂಟ್ಸ್'ನಲ್ಲಿರುವ ವಾದವನ್ನೂ ಸ್ಟಿಗ್ಲಿಟ್ಸ್ ಹೊಸ ರೀತಿಯಲ್ಲಿ ಪರಿಭಾಷಿಸುತ್ತಾರೆ. ಅರ್ಥವ್ಯವಸ್ಥೆ, ದಕ್ಷತೆ, ಉದಾರವಾದ, ಮರುವಿತರಣೆ, ಬೆಳವಣಿಗೆ, ಪರಿಸರ ಎಲ್ಲವನ್ನೂ ಒಂದು ಸಮತೋಲನದಲ್ಲಿಟ್ಟು ಸಾರ್ವಜನಿಕ ನೀತಿಯ ರೂಪಕಲ್ಪನೆ ಕೈಗೊಳ್ಳುವುದು ಕಷ್ಟದ ಕೆಲಸ. ಇದು, ಅಂತರ್‌ವಿರೋಧಗಳನ್ನು ನಿಭಾಯಿಸುತ್ತಾ ಮುಂದುವರೆವ ಕತ್ತಿಯಲುಗಿನ ಸವಾರಿಯಂತಹ ಸೂಕ್ಷ್ಮ ವಿಷಯ. ಯಾವುದಕ್ಕೂ ಇದಮಿತ್ಥಂ ಎನ್ನುವಂತಹ ನೇರ-ಸರಳ ಉಪಾಯವಿಲ್ಲ. ಜಗತ್ತಿನಲ್ಲಿ ವ್ಯಾಪಾಕವಾಗಿ- ವ್ಯಕ್ತಿಗಳ ನಡುವೆ, ಕುಟುಂಬಗಳ ನಡುವೆ, ರಾಷ್ಟ್ರಗಳ ನಡುವೆ, ತಲೆಮಾರುಗಳ ನಡುವೆ, ಮಾನವ ಮತ್ತು ಪರಿಸರದ ನಡುವೆ- ಬಿಕ್ಕಟ್ಟುಗಳು ಪಸರಿಸಿವೆ. ಯಾವಾಗಲೂ ಒಂದು ರೀತಿಯ ಜಟಾಪಟಿ ಇದ್ದೇ ಇದೆ. ಪ್ರತಿ ಸಂದರ್ಭದಲ್ಲೂ ಒಂದು ಬದಿ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಪ್ರಗತಿಯ ಪಥದಲ್ಲಿ ಉದ್ಧಾರವಾಗಲು ಮುಂದುವರೆದರೆ ಅದು ಎದುರಿಗಿರುವ ವ್ಯಕ್ತಿ ಅಥವಾ ಪರಿಸರದ ಅ-ಸ್ವಾತಂತ್ರ್ಯದಿಂದಲೇ ಸಾಧ್ಯವಾಗುತ್ತದೆ. ಎದುರಿಗಿರುವ ವ್ಯಕ್ತಿ ಅಥವಾ ಸಂಪನ್ಮೂಲಕ್ಕೆ ಎಷ್ಟು ಕಡಿಮೆ ನೋವುಂಟು ಮಾಡುತ್ತಾ, ವ್ಯಾಪಕವಾದ ಕ್ಷೇಮಾಭಿವೃದ್ಧಿಯನ್ನು ಸಾಧಿಸುವ ಮಾರ್ಗವೇನು ಎನ್ನುವುದನ್ನು ಈ ಪುಸ್ತಕ ಶೋಧಿಸುತ್ತದೆ.

ಇವು ಕಷ್ಟದ ಪ್ರಶ್ನೆಗಳು. ಆದರೆ ಸಮಸ್ಯೆಗಳನ್ನು ಹುಡುಕಿ ಅದನ್ನು ಅರ್ಥಮಾಡಿಕೊಳ್ಳುವುದು ಜಟಿಲವಲ್ಲ. ಆದರೆ ಸರಳ ಉತ್ತರ ಮತ್ತು

ಆಧುನಿಕ ಅರ್ಥಶಾಸ್ತ್ರಜ್ಞರು ಸಹಕಾರ ವ್ಯವಸ್ಥೆಯ ಬಗ್ಗೆ ಮಾತಾಡಿರುವುದು ಕಡಿಮೆ. ಜೋಸೆಫ್ ಸ್ಟಿಗ್ಲಿಟ್ಸ್ ನಮ್ಮ ಅರ್ಥವ್ಯವಸ್ಥೆಯಲ್ಲಿ ಸಹಕಾರಿ ಸಂಸ್ಥೆಗಳ ಪಾತ್ರದ ಬಗ್ಗೆ ಮಾತನಾಡುವುದು ಕುತೂಹಲಕರ.